# ವಿಟಿಯು ವಲಯ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾವಳಿ

**ಶಿರಸಿ ಸಮಾಚಾರ ⏭ ಹಳಿಯಾಳ:** ವಿಟಿಯು ಬೆಳಗಾವಿಯ ವಲಯ ಮಟ್ಟದ ಬಾಸ್ಕೆಟ್ ಬಾಲ್ ಪಂದ್ಯಾವಳಿಯು ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದಲ್ಲಿ ಅಕ್ಟೋಬರ್ 15ರಂದು ಜರುಗಿತು.

ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ವಿನಾಯಕ ಲೋಕುರ್ ಸೋಲು ಗೆಲುವಿನ ಲೆಕ್ಕಾಚಾರ ಹಾಕದೆ ಸ್ಪರ್ಧಾ ಮನೋಭಾವದಿಂದ ಸ್ಪರ್ಧಿಸುವಂತೆ ಕ್ರೀಡಾಪಟುಗಳಿಗೆ ಕರೆ ನೀಡಿದರು.

ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ವಿಶ್ವವಿದ್ಯಾಲಯದ ವಲಯ ಮಟ್ಟದ ಕ್ರೀಡಾಕೂಟವನ್ನು ಮಹಾವಿದ್ಯಾಲಯವು ಸಂಯೋಜಿಸುತ್ತಿರುವುದು ಸಂತಸ ತಂದಿದೆ ಎಂದು ಹೇಳುತ್ತ, ಭಾಗವಹಿಸಿರುವ ಎಲ್ಲಾ ತಂಡಗಳಿಗೂ ಶುಭ ಹಾರೈಸಿದರು. ಮಹಾವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶಕ ಗದಿಗೆಪ್ಪ ಎಳ್ಳೂರ್ ಸ್ವಾಗತಿಸಿ ನಿರೂಪಿಸಿದರು.

ಧಾರವಾಡದ ಎಸ್‌ಡಿಎಂಸಿಇಟಿ, ಚಿಕ್ಕೋಡಿಯ ಕೆಎಲ್ಇಐಟಿ, ಬೆಳಗಾವಿಯ ಎಸ್‌ಜಿಬಿಐಟಿ, ವಿತಾವಿ ಬೆಳಗಾವಿ, ಕೆಎಲ್ಎಸ್‌ಜಿಐಟಿ ಬೆಳಗಾವಿ, ಹುಬ್ಬಳ್ಳಿಯ ಕೆಎಲ್ಇಐಟಿ ಹಾಗೂ ಕೆಎಲ್ಎಸ್‌ವಿಡಿಐಟಿ ಮಹಾವಿದ್ಯಾಲಯದ ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದೆ.

ಅಂತಿಮ ಹಂತದ ನಿರ್ಣಾಯಕ ಸೆಣಸಾಟ ಜಿಐಟಿ ಬೆಳಗಾವಿ ಹಾಗೂ ಕೆಎಲ್ಇಐಟಿ ಹುಬ್ಬಳ್ಳಿಯ ನಡುವೆ ನಡೆಯಿತು.

ಕೆಎಲ್ಇಐಟಿ ಹುಬ್ಬಳ್ಳಿ ತಂಡವು ಪ್ರಥಮ ಸ್ಥಾನ ಮತ್ತು ಕೆಎಲ್ಎಸ್‌ಜಿಐಟಿ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು ವಿಜಯಶಾಲಿಯಾದ ತಂಡಕ್ಕೆ ಡಾ. ವಿ ಎ ಕುಲಕರ್ಣಿ ಬಹುಮಾನ ವಿತರಿಸಿ ಪುರಸ್ಕರಿಸಿದರು. ಈ ಸಂದರ್ಭದಲ್ಲಿ ಪ್ರೊ. ಮಂಜುನಾಥ, ಪ್ರೊ ಗುರುರಾಜ್ ಜೋಶಿ ಉಪಸ್ಥಿತರಿದ್ದರು. ಪ್ರಥಮ ಹಾಗೂ ದ್ವಿತೀಯ ಸ್ಥಾನ ಪಡೆದ ತಂಡವು ವಿತಾವಿಯ ಮುಂದಿನ ಹಂತದ ಪಂದ್ಯಾವಳಿಗೆ ಆಯ್ಕೆಯಾಗಿದೆ.